# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-2003/2013/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 17/4/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಹೆಚ್.ಸಿ.ಹನುಮಂತೇಗೌಡ, ಮುಖ್ಯಾಧಿಕಾರಿ, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, (ಹಾಲಿ ಪುರಸಭೆ, ಗೌರಿಬಿದನೂರು), ಚಿಕ್ಕಬಳ್ಳಾಪುರ, (2) ಶ್ರೀ.ಎಂ.ಡಿ.ಸಮೀವುಲ್ಲಾ, ಹಿಂದಿನ ರಾಜಸ್ವ ನಿರೀಕ್ಷಕರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಿವೃತ್ತ), (3) ಶ್ರೀಮತಿ.ಪವಿತ್ರ ಜೆ, ಕಿರಿಯ ಅಭಿಯಂತರರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಗರಸಭೆ, ಕನಕಪುರ), ಮತ್ತು (4) ಶ್ರೀ.ವಿ.ನಾಗೇಶ್, ಕಂದಾಯ ನಿರೀಕ್ಷಕರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಗರಸಭೆ, ಹೊಸಕೋಟೆ) ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಅಪ್ಸರ್ ಪಾಷಾ, ಹೊಸ ಪೋಲೀಸ್ ಕ್ವಾರ್ಟರ್ಸ್ ಹತ್ತಿರ, ವಾರ್ಡ್ ನಂ.19, ಆಜಾದ್‌ನಗರ, ಶಿಡ್ಲಘಟ್ಟ ಟೌನ್ ಮತ್ತು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಹೆಚ್.ಸಿ.ಹನುಮಂತೇಗೌಡ, ಮುಖ್ಯಾಧಿಕಾರಿ, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, (ಹಾಲಿ ಪುರಸಭೆ, ಗೌರಿಬಿದನೂರು), ಚಿಕ್ಕಬಳ್ಳಾಪುರ, (2) ಶ್ರೀ.ಎಂ.ಡಿ.ಸಮೀವುಲ್ಲಾ, ಹಿಂದಿನ ರಾಜಸ್ವ ನಿರೀಕ್ಷಕರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಿವೃತ್ತ), (3) ಶ್ರೀಮತಿ.ಪವಿತ್ರ ಜೆ, ಕಿರಿಯ ಅಭಿಯಂತರರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಗರಸಭೆ, ಕನಕಪುರ), ಮತ್ತು (4) ಶ್ರೀ.ವಿ.ನಾಗೇಶ್, ಕಂದಾಯ ನಿರೀಕ್ಷಕರು, ಪುರಸಭೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ, (ಹಾಲಿ ನಗರಸಭೆ, ಹೊಸಕೋಟೆ) (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ದೂರುದಾರರು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಪುರಸಭೆಯ 1ನೇ ಟಿ.ಎಂ.ಸಿ.ಬಡಾವಣೆ ಅಸೆಸ್‌ಮೆಂಟ್ ನಂ.941 ಹೊಸ ನಂ.1299/940 ಸೈಟ್ ನಂ.15 ರ ಪಕ್ಕದಲ್ಲಿ ಬರುವ ಪುರಸಭಾ ವ್ಯಾಪ್ತಿಯ ಸಾರ್ವಜನಿಕ ರಸ್ತೆಯನ್ನು ಎಸ್.ಎ.ಷಫೀವುಲ್ಲಾ ಎಂಬುವರು ಅತಿಕ್ರಮ ಮಾಡಿ ಪುರಸಭೆಯಿಂದ ಲೈಸೆನ್ಸ್ ಪಡೆದು ಕಟ್ಟಡ ಕಟ್ಟಿ ಬಾಡಿಗೆಗೆ ನೀಡಿರುತ್ತಾರೆ. ಈ ಬಗ್ಗೆ

ಪುರಸಭೆಯ ಅಧಿಕಾರಿಗಳೂ ಕೂಡ ಶಾಮೀಲಾಗಿದ್ದಾರೆಂದು ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

3) 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಷಫೀವುಲ್ಲಾ ಎಂಬುವರು ನಿರ್ಮಾಣ ಮಾಡಿರುವ ಮನೆ 1ನೇ ಟಿ.ಎಂ.ಸಿ. ಲೇಔಟ್ ನ ಸೈಟ್ ನಂ.15 ರಲ್ಲಿದ್ದು, ಈ ನಿವೇಶನವು 21/8/86 ರಂದು ಪುರಸಭೆಯಿಂದ ಕೃಷ್ಣಪ್ಪ ಎಂಬುವರಿಗೆ ನೋಂದಣಿಯಾಗಿದ್ದು, ಸದರಿಯವರು ಷಫೀವುಲ್ಲಾ ರವರ ತಾಯಿಗೆ 23/4/87 ರಂದು ನೋಂದಣಿ ಮಾಡಿ ಕೊಟ್ಟಿರುತ್ತಾರೆ. ಸೈಟ್ ನಂ.15 ರ ಪೂರ್ವಕ್ಕೆ ರಸ್ತೆ ಬದಿಯಲ್ಲಿ ಉದ್ದಕ್ಕೂ ರಸ್ತೆ ಅತಿಕ್ರಮಿಸಿ ಮನೆ ಕಟ್ಟಿಕೊಂಡು ಪೂರ್ವಕ್ಕೆ ಸಣ್ಣ ರಸ್ತೆ ಬಿಟ್ಟಿರುತ್ತಾರೆ. ಎಸ್.ಎ.ಷಫೀವುಲ್ಲಾ ರವರ ನಿವೇಶನದ ಖಾತಾ ಸಂ.940/1299 (ಹಿಂದೆ 941/909 ಆಗಿತ್ತು) ದಿ.23/5/90 ರಂದು ಷಫೀವುಲ್ಲಾ ರವರ ತಾಯಿ ಹೆಸರಿಗೆ ಖಾತಾ ವರ್ಗಾವಣೆಯಾಗಿದ್ದು, ಅವರ ತಾಯಿಯ ಮರಣಾ ನಂತರ ಈ ನಿವೇಶನ ಈ ಷಫೀವುಲ್ಲಾ ರವರ ಸ್ವಾಧೀನದಲ್ಲಿರುತ್ತದೆ. ಪುರಸಭಾ ವತಿಯಿಂದ ಹರಾಜು ಮೂಲಕ ವಿಲೇವಾರಿ ಮಾಡಿರುವ ನಿವೇಶನಗಳ ನಕ್ಷೆಗೂ, ಸ್ಥಳದಲ್ಲಿ ಕಟ್ಟಿರುವ ಮನೆಗಳಿಗೂ ತುಂಬಾ ವ್ಯತ್ಯಾಸವಿದ್ದು, ರಸ್ತೆಯನ್ನು ಒತ್ತುವರಿ ಮಾಡಿರುವುದು ನಿಜವಾಗಿದೆ. ಕಟ್ಟಡದ ಬಗ್ಗೆ ಸೂಕ್ತ ದಾಖಲೆ ಒದಗಿಸಲು ಮುಖ್ಯಾಧಿಕಾರಿಗಳು ನೋಟೀಸು ನೀಡಿದ್ದು, ಸ್ಥಳ ಪರಿಶೀಲನೆ ಮಾಡಿ ಒತ್ತುವರಿ ಬಗ್ಗೆ ಸ್ಥಳ ನಕಾಶೆ ತಯಾರಿಸಿಕೊಡಲು ಪುರಸಭೆಯ ಕಿರಿಯ ಇಂಜಿನಿಯರ್‌ರವರಿಗೆ, ಪಕ್ಕದಲ್ಲಿರುವ ಸರ್ಕಾರಿ ಖರಾಬು ಜಮೀನನ್ನು ಸರ್ವೆ ಮಾಡಿಸಿಕೊಡಲು ತಹಶೀಲ್ದಾರ್‌ರವರಿಗೂ ಪತ್ರ ಬರೆಯಲಾಗಿದೆ. ಒತ್ತುವರಿಯನ್ನು ಷಫೀವುಲ್ಲಾರವರು ಮಾಡಿರುತ್ತಾರೋ ಅಥವಾ 2ನೇ ಕಾರ್ಮಿಕ ನಗರ ಸಾರ್ವಜನಿಕರು ಮಾಡಿರುತ್ತಾರೋ ಎಂಬುದು ಸರ್ವೆಯಿಂದ ತಿಳಿದುಬರಬೇಕಾಗಿದೆ. ಸರ್ವೆ ವರದಿ ಆಧರಿಸಿ ಕ್ರಮ ವಹಿಸಿದ್ದು, ಇದರಲ್ಲಿ ತನ್ನ ಪಾತ್ರ ಏನೂ ಇಲ್ಲ ಎಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿರುತ್ತಾರೆ.

5) ಶಿಡ್ಲಘಟ್ಟ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಸಾರ್ವಜನಿಕ ರಸ್ತೆಯ ಒತ್ತುವರಿ ಯಾರಿಂದ ಆಗಿದೆ ಎನ್ನುವ ಬಗ್ಗೆ ಸರ್ವೆ ಮೂಲಕ ಗುರುತಿಸಿಕೊಂಡು ಒತ್ತುವರಿ ತೆರವುಗೊಳಿಸಲು ಶೀಘ್ರ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಲಾಗಿತ್ತು. ಪೌರಾಯುಕ್ತರು, ನಗರಸಭೆ, ಶಿಡ್ಲಘಟ್ಟ ಇವರು ದಿ.7/12/15 ರಂದು ಕಳುಹಿಸಿರುವ ತನ್ನ ಪತ್ರದಲ್ಲಿ ದಿ.30/9/2015 ರಂದು ಬಡಾವಣೆಯ ರಸ್ತೆ ಒತ್ತುವರಿ ಬಗ್ಗೆ ವಿವರವಾದ ವರದಿಯನ್ನು ಕಚೇರಿಗೆ ದಿ.1/10/15 ರಂದು ಮುದ್ದಾಂ ನೀಡಲಾಗಿರುತ್ತದೆಂಬ ಅಂಶವನ್ನು ತಿಳಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿ, ದೂರುದಾರರು ಹೇಳಿರುವಂತೆ ಸದರಿ ಸ್ಥಳದಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಹಾಗೂ ರಸ್ತೆ ಇರುವ ಬಗ್ಗೆ ನಿಶಾನೆಗಳಾಗಲೀ ಅಥವಾ ದಾಖಲೆಗಳಾಗಲೀ ತಮ್ಮಲ್ಲಿ ಲಭ್ಯವಿರುವುದಿಲ್ಲ ಹಾಗೂ ದೂರುದಾರರೂ ಸಹ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಆದ್ದರಿಂದ, ದಿ.30/9/2015 ರಂದು ಪೌರಾಯುಕ್ತರು, ನಗರಸಭೆ, ಶಿಡ್ಲಘಟ್ಟ ಇವರು ಸಲ್ಲಿಸಿರುವ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿ ಪ್ರತ್ಯುತ್ತರ ಸಲ್ಲಿಸುವಂತೆ ಆದೇಶಿಸಲಾಗಿತ್ತು.

6) ದೂರುದಾರರು ತನ್ನ ಪ್ರತ್ಯುತ್ತರದಲ್ಲಿ ಶ್ರೀ.ದಿಲೀಪ್, ಪರಿಸರ ಅಭಿಯಂತರರು, ನಗರಸಭೆ, ಶಿಡ್ಲಘಟ್ಟ, ಇವರು ಅತಿಕ್ರಮಣದಾರರೊಂದಿಗೆ ಶಾಮೀಲಾಗಿ ಅತಿಕ್ರಮಣವಾಗಿಲ್ಲವೆಂದು ತಪ್ಪು ಮಾಹಿತಿ ನೀಡಿರುತ್ತಾರೆ. ದಿ.5/1/16 ರಂದು ನಗರಸಭಾ ಕಾರ್ಯಾಲಯದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿ ಪ್ರತಿ ಹಾಗೂ ಈ ಹಿಂದೆ ಅಧಿಕಾರಿಗಳು ರಸ್ತೆ ಇರುವುದಾಗಿ ನೀಡಿರುವ ಪ್ರತಿಯನ್ನು ಹಾಗೂ ಬಡಾವಣೆಯ ನಕ್ಷೆಯನ್ನು ಹಾಜರು ಪಡಿಸಿರುತ್ತಾರೆ. ಪುರಸಭೆಯ ಮುಖ್ಯಾಧಿಕಾರಿಗಳು ದೂರುದಾರರು ಹೇಳಿರುವಂತೆ ಸದರಿ ಸ್ಥಳದಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಮತ್ತು ರಸ್ತೆ ಇರುವ ಬಗ್ಗೆ ನಿಶಾನೆಗಳಾಗಲೀ ಅಥವಾ ದಾಖಲೆಗಳಾಗಲೀ ಲಭ್ಯವಿಲ್ಲವೆಂದು ತಿಳಿಸಿರುವ ಕಾರಣ ಈ ಪ್ರಕರಣದಲ್ಲಿ ರಸ್ತೆ ಇದೆಯೋ ಇಲ್ಲವೋ ಎಂಬ ಬಗ್ಗೆ ಸ್ಥಳ ತನಿಖೆ ನಡೆಸುವ ಮತ್ತು ದಾಖಲಾತಿಗಳನ್ನು ಪರಿಶೀಲಿಸುವ ಅಗತ್ಯ ಕಂಡುಬಂದ ಕಾರಣ ಈ ಪ್ರಕರಣದಲ್ಲಿ ತನಿಖೆಯನ್ನು ನಡೆಸಿ ವರದಿ ನೀಡುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಆದೇಶಿಸಲಾಗಿತ್ತು.

7) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿಕ್ಕಬಳ್ಳಾಪುರ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

i. ಟಿ.ಎಂ.ಸಿ.ಬಡಾವಣೆ ಕ್ರ.ಸಂ.1 ರ ಮೊದಲನೇ ಸಾಲಿನಲ್ಲಿ ಗುರ್ತಿಸಿರುವ 15 ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿರುತ್ತಾರೆ. ಆದರೆ ಕಟ್ಟಡಗಳನ್ನು ಕಟ್ಟುವ ಸಮಯದಲ್ಲಿ ಫಲಾನುಭವಿಗಳು 1ನೇ ನಿವೇಶನವನ್ನು ಖಾಲಿ ಬಿಟ್ಟು 2ನೇ ನಿವೇಶನದಿಂದ ಕಟ್ಟಡಗಳನ್ನು ಕಟ್ಟಿರುವುದರಿಂದ ರಸ್ತೆಯ ಜಾಗವನ್ನು 15ನೇ ನಿವೇಶನವೆಂದು ತಿಳಿದು ಅತಿಕ್ರಮಿಸಿಕೊಂಡಿರುವುದು ಪರಿಶೀಲನೆಯ ಸಮಯದಲ್ಲಿ ಕಂಡುಬಂದಿರುತ್ತದೆ ಹಾಗೂ 1ನೇ ನಿವೇಶನವು ಹಾಲಿ ಈಗಲೂ ಸಹ ಕಾಲಿಲ ಉಳಿದುಕೊಂಡಿರುತ್ತದೆ.

ii. ದಿ.12/1/2010 ರ ಸಾಮಾನ್ಯ ಸಭೆಯ ನಡಾವಳಿಯ ನಂತರ ಪುರಸಭೆಯ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಹಾಲಿ ಖಾಲಿ ಉಳಿದಿರುವ 1ನೇ ನಿವೇಶನವನ್ನು 15 ರ ನಿವೇಶನವನ್ನು ಹಂಚಿಕೆ ಮಾಡಿದ ಮಾಲೀಕರಿಗೆ ಹಂಚಿಕೆ ಮಾಡಿ ರಸ್ತೆಯನ್ನು ಉಳಿಸಲು ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಪುರಸಭೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದ ಕಾರಣ ರಸ್ತೆಯಲ್ಲಿ 15 ರ ನಿವೇಶನದಾರರು ಕಾಂಪೌಂಡ್‌ನ್ನು ನಿರ್ಮಿಸಿಕೊಂಡು ಕಟ್ಟಡವನ್ನು ಕಟ್ಟಿರುತ್ತಾರೆ. ಆದ್ದರಿಂದ, 15ರ ನಿವೇಶನವೆಂದು ಕಟ್ಟಿರುವ ಕಟ್ಟಡವು ರಸ್ತೆಯ ಸ್ಥಳವಾಗಿದ್ದು, ಈ ಕಟ್ಟಡವನ್ನು ತೆರವುಗೊಳಿಸಬೇಕಾಗಿರುತ್ತದೆ.

iii. ಆದ್ದರಿಂದ, ಅಂದಿನ ಶಿಡ್ಲಘಟ್ಟ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಶ್ರೀ.ಹನುಮಂತೇಗೌಡ ಹಾಲಿ ಕರ್ತವ್ಯ ಮುಖ್ಯಾಧಿಕಾರಿ, ಗೌರಿಬಿದನೂರು ಪುರಸಭೆ ಮತ್ತು ರಾಜಸ್ವ ನಿರೀಕ್ಷಕರಾದ ಶ್ರೀ.ಎಂ.ಡಿ.ಸಮೀವುಲ್ಲಾ ಹಾಲಿ ನಿವೃತ್ತಿ ವಾಸ.ಶಿಡ್ಲಘಟ್ಟ ನಗರ, ನಾಗೇಶ್ ಹಾಲಿ ರಾಜಸ್ವ ನಿರೀಕ್ಷಕರು, ಹೊಸಕೋಟೆ ಹಾಗೂ ಕಿರಿಯ ಅಭಿಯಂತರರಾದ ಪವಿತ್ರ ಹಾಲಿ ಕಿರಿಯ ಅಭಿಯಂತರರು, ನಗರಸಭೆ, ರಾಮನಗರ ರವರು ರಸ್ತೆಯಲ್ಲಿನ ಕಟ್ಟಡವನ್ನು

ತೆರವುಗೊಳಿಸುವಲ್ಲಿ ನಿರ್ಲಕ್ಷ್ಯತೆ ತೋರಿಸಿರುವುದು ವಿಚಾರಣೆಯಿಂದ ದೃಢಪಟ್ಟಿರುತ್ತದೆಯೆಂದು ತಮ್ಮ ವರದಿಯಲ್ಲಿ ಹೇಳಿರುತ್ತಾರೆ.

8) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಶ್ರೀ.ಹನುಮಂತೇಗೌಡ, ಎಂ.ಡಿ.ಸಮೀವುಲ್ಲಾ, ನಾಗೇಶ್, ಮತ್ತು ಪವಿತ್ರ ಈ ನಾಲ್ಕು ಜನ ಕಟ್ಟಡವನ್ನು ತೆರವುಗೊಳಿಸಲು ನಿರ್ಲಕ್ಷ್ಯತೆ ತೋರಿಸಿರುವುದು ವಿಚಾರಣೆಯಿಂದ ದೃಢಪಟ್ಟಿರುತ್ತದೆಯೆಂದು ಹೇಳಿರುವ ಕಾರಣ ವಿಚಾರಣಾಧಿಕಾರಿಯ ವರದಿಯನ್ನು ಎದುರುದಾರರಿಗೆ ಕಳುಹಿಸಿ ಅದರ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

9) 1 ರಿಂದ 4ನೇ ಎದುರುದಾರರು ತನಿಖಾ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯು ತನಿಖಾ ವರದಿಯನ್ನು ಅಲ್ಲಗಳೆಯಲು ಪೂರಕವಾಗಿರುವುದಿಲ್ಲ. ಪೊಲೀಸ್ ಅಧೀಕ್ಷಕರ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಸಾರ್ವಜನಿಕ ರಸ್ತೆಯನ್ನು ಅತಿಕ್ರಮ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದು, ಅದನ್ನು ಕಾನೂನು ರೀತ್ಯ ತೆರವುಗೊಳಿಸುವುದು ಅವಶ್ಯವಾಗಿರುತ್ತದೆ.

11) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಾರ್ವಜನಿಕ ರಸ್ತೆಯನ್ನು ಅತಿಕ್ರಮ ಮಾಡಿ ಕಟ್ಟಿರುವ ಕಟ್ಟಡದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 13/4/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**